ದಿನಾಂಕ:14-10-2014ರಂದು ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆಃ- ವಾದಿಪರ ವಕೀಲರಿಂದಃ-

ನಾನು ಈ ದಾವೆಯಲ್ಲಿ 2ನೇ ಪ್ರತಿವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆ ಸಾಕ್ಷ್ಯವನ್ನು ಶಪಥ ಪತ್ರದ ಮೂಲಕ ಸಲ್ಲಿಸುತ್ತಿದ್ದು ಅದರಲ್ಲಿರುವ ಎಲ್ಲ ವಿಷಯಗಳೆಲ್ಲ ಸತ್ಯವಾಗಿವೆ. ಈ ಹಿಂದೇ ನನ್ನ ಸಾಕ್ಷಿದಲ್ಲಿ ನಾನು ವಾದಿಯಲ್ಲಿ ಸಂಸ್ಥೆಯಲ್ಲಿ ವ್ಯೈವಸ್ಥಾಪಕ ನಿರ್ದೇಶಕನೆಂದು ತಪ್ಪಾಗಿ ಬೆರಳಚ್ಚು ಮಾಡಲಾಗಿದೆ.

ಆದ್ದುರಿಂದ ದಾವೆಯನ್ನು ವಜಾ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲುಃ- ಪ್ರತಿವಾದಿ ಗಳಪರ ಶ್ರೀ ಬಿ. ಆರ್. ಎಂ. ವಕೀಲರಿಂದಃ-

ನನ್ನ ತಂದೆ ತೀರಿಕೊಂಡಿದ ನಂತರ ನಾನು, ಮತ್ತು 3ನೇ ಪ್ರತಿವಾದಿ ದಾವಾ ಸ್ವತ್ತುಗಳನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಅರ್ಜಿ ಕೊಟ್ಟಿದ್ದೆವು. ವಾದಿಗಳು ಅದಕ್ಕೆ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ಹೆಸರಿಗೆ ಖಾತೆ ವರ್ಗಾವಣೆ ಆಗಿಲ್ಲಾ. 05 ಜನಾ ಮಕ್ಕಳು ಎಂದು ತಹಸೀಲ್ದಾರ ತೀರ್ಮಾನಿಸಿದ್ದಾರೆ. ನನ್ನ ತಂದೆ 1ನೇ ವಾದಿ ಜೊತೆ 20 ವರ್ಷ ಸಂಸಾರ ಮಾಡಿದ್ದಾನೇಂದರೆ ಸರಿಯಲ್ಲಾ. ವಾದಿಗಳಗೆ ಆಸ್ತಿಯಲ್ಲಿ ಸಮಪಾಲು ಕೊಡಬೇಕು ಎಂದು ನನ್ನ ತಂದೆ ಹೇಳುತಿದ್ದರು ಎಂದರೆ ಸರಿಯಲ್ಲಾ. ನಾನು ನನ್ನ ಮದುವೆಗೆ ನನ್ನ ತಂದೆಯನ್ನು ಕರೆಉಲ್ಲಾ ಎಂದರೆ ಸರಿಯಲ್ಲಾ. ನಾನು ನನ್ನ ಮದುವೆ ಆಹ್ವಾನ ಪತ್ರಿಕೆಯನ್ನು ನನ್ನ ತಂದೆಗೆ ಕೊಟ್ಟಿಲ್ಲಾ. ವಾದಿಗಳಗೆ ಪಾಲು ಕೊಡಬೇಕು ಎಂದು ನನ್ನ ತಂದೆ ನನಗೆ ಬುದ್ಧಿವಾದ ಹೇಳುತ್ತಿದ್ದಾ ಎಂದರೆ ಸರಿಯಲ್ಲ. ನಾವು ಎಲ್ಲಾ ಅವರ ಮೇಲೆ ಹಲ್ಲೇ ಮಾಡಿದೇವು ಎಂದರೆ ಸರಿಯಲ್ಲಾ. ಹಲವಾರು ಬಾರಿ ಹಲ್ಲೇ ಮಾಡಿದೇವು ಎಂದರೆ ಸರಿಯಲ್ಲ. 1ನೇ ವಾದಿ ನನ್ನ ಚಿಕ್ಕಮ್ಮಾ ಎಂದರೆ ಸರಿಯಲ್ಲಾ. ವಾದಿ 2 ರಿಂದ 4 ನನ್ನ ಸಹೋದರ ಸಹೋದರಿಯರು ಎಂದರೆ ಸರಿಯಲ್ಲ. ನನ್ನ ಶಪಥ ಪತ್ರದಲ್ಲಿ ಸುಳ್ಳು ವಿಚಾರಗಳನ್ನು ನಮೂದಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ. ಪೋಲಿಸಠಾಣೆಯಲ್ಲಿ ನಾವು ಒಪ್ಪಿ ಮುಚ್ಚಳಿಕೆ ಬರೆದುಕೊಟ್ಟಿದ್ದೆವೆ ಎಂದರೆ ಸರಿಯಲ್ಲಾ. ನನ್ನ ತಮ್ಮನಿಗೆ ಆಸ್ತಿ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ)

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಯಚೂರು.